MADAM SPEAKER.—I think the House agrees with the report. The question is :

" That this Assembly agrees with the Sixteenth Report of the Committee on Private Members Bills and Resolutions. "

The motion was adopted.

Taking over the Palaces of the Ex-Maharaja, Mysore

ಶ್ರೀ ಕೋಣದೂರು ಲಿಂಗಪ್ಪ (ತಿರ್ಥಹಳ್ಳಿ).—ನಾನು ನಿನ್ನೆಯ ದಿವಸ ಕ್ರಮಬದ್ಧವಾಗಿ ಒಂದು ನೋಟೀಸನ್ನು ಕಳುಹಿಸಿದ್ದೇನೆ. ಅದರ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶ ಕೊಡಬೇಕು. ಮೈಸೂರಿನ ಮೂರು ಅರಮನೆಗಳನ್ನು ಪರಭಾರೆ ಮಾಡುವುದಕ್ಕೆ ಅನುಮತಿಯನ್ನು ಏನು ಕೊಟ್ಟಿದ್ದಾರೆ ಅದಕ್ಕೆ ನಮ್ಮ ರಾಜ್ಯಸರ್ಕಾರದವರ ಸಲಹೆಯುಂತೆ ಕೊಟ್ಟಿದ್ದಾರೆ. ಎನ್ನುವ ಅಭಿಪ್ರಾಯ ಇದೆ. ಇದರ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನೋಡುತ್ತೇನೆ, ಇಷ್ಟು ಅವಸರದಿಂದ ಹೋದರೆ ಹೇಗೆ ?

Non-official Resolutions :

(*i*) *re*: Non-availability of Fertilisers in Bijapur District

(Debate Contd.)

† ಶ್ರೀ ಪಿ. ಎಂ. ಭಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಣೀಯರೇ, ಬಿಜಾಪುರ ಜಿಲ್ಲೆಯಲ್ಲಿ ಒಟ್ಟಾರೆ 11 ತಾಲ್ಲೂಕುಗಳು ಇವೆ. 11 ತಾಲ್ಲೂಕುಗಳ ಪೈಕಿಜ ಮುಖಂಡ, ಮುಧೋಳ ಮತ್ತು ಬೀಳಗಿ, ಈ ಮೂರು ತಾಲ್ಲೂಕುಗಳಲ್ಲಿ ಘಟಪ್ರಭಾ ಲೆಫ್ಟ್ ಬ್ಯಾಂಕ್ ಕೆನಾಲ್‌ನಿಂದ ನೀರಾವರಿಯಾಗುತ್ತಿದೆ. ಅದೇ ಪ್ರಕಾರವಾಗಿ, ಕೃಷ್ಣ ಬಲದಂಡೆ ಮೇಲೆ ಏತ ನೀರಾವರಿಯಿಂದ ಕೆಲವು ಕಡೆ ಭೂಮಿ ನೀರಾವರಿಯಾಗುತ್ತಿದೆ. ಈ ರೀತಿಯಾಗಿ ಬಹಳ ವರ್ಷಗಳಿಂದ ವ್ಯವಸ್ಥೆಯಾಗಿದೆ. ಮೊಟ್ಟಮೊದಲು 1956ರ ಪೂರ್ವದಲ್ಲಿ ಘಟಪ್ರಭ ಲೆಫ್ಟ್ ಬ್ಯಾಂಕ್ ಕೆನಾಲ್‌ನಿಂದ ಈ ಮೂರು ತಾಲ್ಲೂಕುಗಳಿಗೂ ನೀರಾವರಿಯಾಗಬೇಕು ಎಂದು ಇತ್ತು. ಆದರೆ ಈಗ ಇದರಿಂದ ಈ ಮೂರು ತಾಲ್ಲೂಕುಗಳಲ್ಲಿ 19,500 ಹೆಕ್ಟೇರು ಭೂಮಿ ನೀರಾವರಿಯಾಗುತ್ತಿದೆ. ಅದೇ ಪ್ರಕಾರ ಕೃಷ್ಣ ಬಲದಂಡೆಯಲ್ಲಿ 3600 ಹೆಕ್ಟೇರ್ ನೀರಾವರಿಯಾಗುತ್ತಿದೆ. ಈ ವ್ಯವಸ್ಥೆಯಾಗಿ ಬಹಳ ದಿವಸವಾಗಿದೆ. ನಮ್ಮ ಈ ಮೂರು ತಾಲ್ಲೂಕುಗಳಿಗೆ ನೈಟ್ರೊಜಿನಸ್ ಫರ್ಟಿಲೈಸರ್ 14,000 ಟನ್ ಪ್ರತಿವರ್ಷ ಬೇಕಾಗುತ್ತದೆ. ಈ ಪ್ರಕಾರವಾಗಿ ಇರಾಖೆಯ ಅಧಿಕಾರಿಗಳು ರಿಪೋರ್ಟನ್ನು ಮೇಲಕ್ಕೆ ಕಳುಹಿಸಿರುತ್ತಾರೆ. ಕಳೆದ ವರ್ಷ 1768 ಟನ್ ಫರ್ಟಿಲೈಸರ್ ಅನ್ನು ಮಾತ್ರ ಈ ಮೂರು ತಾಲ್ಲೂಕುಗಳಿಗೆ ಸರ್ಕಾರದ ಕಡೆಯಿಂದ ಸಪ್ಲೈ ಮಾಡಿರುತ್ತಾರೆ. ಇದು ಬಹಳ ಕಡಿಮೆ. ಈ ಮೂರು ತಾಲ್ಲೂಕುಗಳಿಗೆ ಸರ್ಕಾರದವರು ಸಾಕಷ್ಟು ಗೊಬ್ಬರವನ್ನು ಕೊಡುವುದು ಅವಶ್ಯಕ ಇದೆ. ಸಾಕಷ್ಟು ಗೊಬ್ಬರವನ್ನು ಕೊಟ್ಟರೆ, ಪುಡ್ ಗ್ರೈನ್ಸ್ ಅನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಈ ಮೂರು ತಾಲ್ಲೂಕುಗಳು ಉತ್ಪನ್ನ ಮಾಡಲಿಕ್ಕೆ ಸಾಧ್ಯವಿದೆ. ಈ ಮೂರು ತಾಲ್ಲೂಕುಗಳಲ್ಲಿ ಗುಂಡಾಳ್ ಬೆಳೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಅಲ್ಲಿ ಒಂದು ಇದಕ್ಕೆ ಸಂಬಂಧಪಟ್ಟ ಫ್ಯಾಕ್ಟರಿಯನ್ನು ಮಾಡಬೇಕು ಎಂದು ಒಂದು ಕಮಿಟಿ ಸ್ಥಾಪಿತವಾಗಿದೆ. ಸರ್ಕಾರದವರು ಇಡೀ ರಾಜ್ಯಕ್ಕೆ ಕಾರ್ಡುಗಳ ಮೂಲಕ ಫರ್ಟಿಲೈಸರ್ಸ್ ಕೊಡುತ್ತಾರೆಂದು ಈ ಪೂರ್ವದಲ್ಲಿ ಸಾರಿದ್ದಾರೆ. ಕಾರ್ಡುಗಳಲ್ಲಿ ಬೋಗಸ್ ಕಾರ್ಡುಗಳನ್ನು ಉಪಯೋಗ ಮಾಡದಂತೆ ನೋಡಿಕೊಳ್ಳಬೇಕು. ಕೇವಲ ನೀರಾವರಿ ಭೂಮಿಯನ್ನು ಯಾರು ಯಾರು ಹೊಂದಿದ್ದಾರೋ ಅಂಥವರಿಗೆ ಕಾರ್ಡುಗಳನ್ನು ಕೊಡಬೇಕು. ಖುಷ್ಕಿ ಜಮೀನು ಇರುವವರಿಗೆ ಕಾರ್ಡುಗಳನ್ನು ಕೊಡಬಾರದು. ಪ್ರತಿಯೊಂದು ಜಮೀನಿಗೆ ಹೋಗಿ, ನೀರಾವರಿ ಜಮೀನು ಎಷ್ಟು ಇದೆ, ಎನ್ನುವ ಒಂದು ತನಿಖೆಯನ್ನು ಮಾಡಿ, ಫರ್ಟಿಲೈಸರ್ ಕಾರ್ಡುಗಳನ್ನು ಕೊಡಬೇಕಾದ್ದು ಒಳ್ಳೆಯದು. ನೈಟ್ರಾಜಿನಸ್ ಗೊಬ್ಬರದ ಅಭಾವ ದಿಂದಾಗಿ ಈ ಮೂರು ತಾಲ್ಲೂಕಿನ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದಲೇ ನಾನು ಈ